**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರ ನಿಯಮ 72ರ ಅಡಿಯಲ್ಲಿ ಕೋರಿರುವ ಗಮನ ಸೆಳೆಯುವ ಸೂಚನೆ**

ಸೂಚನೆ:-

ತುಮಕೂರು ಜಿಲ್ಲೆ, ತುರುವೇಕೆರೆ ತಾ||, ದೇವಿಹಳ್ಳಿ ಗ್ರಾಮದಲ್ಲಿದ್ದ ಹಿಂದಿನ ಸ್ಮಶಾನ ಜಾಗವನ್ನು ಖಾಸಗಿಯವರಿಗೆ ಮಂಜೂರು ಮಾಡಿ ಹಾಲಿ ಗೋಕಟ್ಟೆ ಒಳಗಿನ ಜಾಗವನ್ನು ಸ್ಮಶಾನವೆಂದು ಸರ್ವೆ ನಂ.42ರಲ್ಲಿ ಗುರುತಿಸಿರುವುದರಿಂದ, ಸ್ಮಶಾನ ಜಾಗವಿಲ್ಲದೆ ತೊಂದರೆಯಾಗಿರುತ್ತದೆ. ಆದುದರಿಂದ, ಸದರಿ ಸರ್ವೆ ನಂ.42ರಲ್ಲಿ ಹಾಲಿ ಲಭ್ಯವಿರುವ ಸರ್ಕಾರಿ ಜಾಗದಲ್ಲಿ 1 ಎಕರೆ ಜಾಗವನ್ನು ಖಾಸಗಿಯವರಿಗೆ ಮಂಜೂರು ಮಾಡದೆ ಸ್ಮಶಾನಕ್ಕೆ ಸರ್ಕಾರದಿಂದ ಕೂಡಲೇ ಮಂಜೂರು ಮಾಡಬೇಕೆಂದು ಹಾಗೂ ಅಲ್ಲಿನ ನಾಗರೀಕರು ಈ ಬಗ್ಗೆ ಅನೇಕ ವರ್ಷಗಳಿಂದ ಉಪವಿಭಾಗಾಧಿಕಾರಿ/ಜಿಲ್ಲಾಧಿಕಾರಿಯವರಿಗೆ ಅರ್ಜಿಗಳನ್ನು ನೀಡಿದಾಗ್ಯೂ ಸದರಿಯವರು ಮೇಲ್ಕಂಡ ಜಾಗ ಮಂಜೂರು ಮಾಡಿರುವುದಿಲ್ಲ. ಆದುದರಿಂದ, ಸರ್ಕಾರದ ನೀತಿ ಹಾಗೂ ನ್ಯಾಯಾಲಯದ ಆದೇಶಗಳಿಗೆ ಅನುಗುಣವಾಗಿ ಕೂಡಲೇ ಸರ್ಕಾರದ ಮಟ್ಟದಿಂದಲೇ 1 ಎಕರೆ ಜಾಗವನ್ನು ಮಂಜೂರು ಮಾಡುವ ಕುರಿತು.

**ಹೇಳಿಕೆ:-**

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ದಬ್ಬೇಘಟ್ಟ ಹೋಬಳಿ, ದೇವಿಹಳ್ಳಿ ಗ್ರಾಮದ ಸ.ನಂ.42 ರಲ್ಲಿ ವಿಸ್ತೀರ್ಣ 00-10 ಗುಂಟೆ ಜಮೀನನ್ನು ಸ್ಮಶಾನದ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಎಲ್ .ಎನ್.ಡಿ.ಎಸ್.ಆರ್:125/05-06, ದಿನಾಂಕ:10.10.2005 ರಂತೆ ಕಾಯ್ದಿರಿಸಲಾಗಿದ್ದು, ಎಂ.ಆರ್.ನಂ.03/05-06. ರಂತೆ ಪಹಣಿ ಇಂಡೀಕರಣ ಮಾಡಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯ್ತಿ, ತುರುವೇಕೆರೆ ರವರಿಗೆ ಹಸ್ತಾಂತರಿಸಲಾಗಿರುತ್ತದೆ.

ಮುಂದುವರೆದು, ಸ.ನಂ.42 ರಲ್ಲಿ ಒಟ್ಟು ವಿಸ್ತೀರ್ಣ 36-36 ಎಕರೆ/ಗುಂಟೆ ಗೋಮಾಳ ವರ್ಗದ ಜಮೀನಿದ್ದು, ಈ ಜಮೀನಿನ ಪೈಕಿ ವಿಸ್ತೀರ್ಣ 28-06 ಎ/ಗುಂ ಜಮೀನು ವಿಲೇಯಾಗಿ ಉಳಿಕೆ ವಿಸ್ತೀರ್ಣ 8-30 ಎ/ಗುಂ ಜಮೀನು ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ನಮೂನೆ-57 ರಲ್ಲಿ 31 ಅರ್ಜಿಗಳು ಹಾಗೂ ನಮೂನೆ 50 ರಲ್ಲಿ 01 ಅರ್ಜಿ ಸ್ವೀಕೃತಗೊಂಡಿರುತ್ತದೆ. ಸದರಿ ಜಮೀನಿನಲ್ಲಿ ಅರ್ಜಿದಾರರು ಹಾಲಿ ಅನುಭವದಲ್ಲಿದ್ದು, ಸದರಿ ಅರ್ಜಿಗಳನ್ನು ಬಗರ್ ಹುಕ್ಕುಂ ಕಮಿಟಿಯಲ್ಲಿ ಮಂಡಿಸಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಂಡು ತದನಂತರ ಸ್ಮಶಾನದ ಉದ್ದೇಶಕ್ಕಾಗಿ ಕಾಯ್ದಿರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ:ಆರ್‌ಡಿ 101 ಎಲ್‌ಜಿಟಿ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು